ಗುಲಬರ್ಗಾ ವಿಶ್ವವಿದ್ಯಾಲಯ
ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ
ದೂರವಾಣಿ ಸಂ.:08472-263202 ಫ್ಯಾಕ್ಸ್: 08472-263206, ಇ-ಮೇಲ್: registrargug@rediffmail.com

ಕ್ರಸಂ. ಗುವಿಕ/ವಿಮವಿ/ಯುಜಿ/ಪ್ರ.ಶಾ./2025-26/315

ದಿನಾಂಕ: 11.07.2025.

# ಪರಿಷ್ಕೃತ-III

## UUCMS ನೋಡಲ್ ಅಧಿಕಾರಿಗಳಿಗೆ ಟಿಪ್ಪಣಿ:

ವಿಷಯ: 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸಿನ ವಿವಿಧ ಪ್ರೋಗ್ರಾಮಗಳ ಪ್ರವೇಶಾತಿಯ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ಉಲ್ಲೇಖ:
1. ಸರಕಾರದ ಆದೇಶ ಸಂಖ್ಯೆ: ಇಡಿ/212/ಯುಎನ್ಇ/2024, ಬೆಂಗಳೂರು, ದಿನಾಂಕ: 04.10.2024.
2. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/2025-26/10, ದಿನಾಂಕ: 05.04.2025.
3. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/35, ದಿ: 11.05.2025.
4. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/232, ದಿ: 28.05.2025.
5. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/279, ದಿ: 25.06.2025.
6. ಸರಕಾರದ ಆದೇಶ ಸಂಖ್ಯೆ: ಇಡಿ/216/ಯುಎನ್ಇ/2025, ಬೆಂಗಳೂರು, ದಿ: 30.06.2025.
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11.07.2025.

*****

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಗುಲಬರ್ಗಾ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟ ಪದವಿ ಮಹಾವಿದ್ಯಾಲಯಗಳಿಗೆ 2025-26ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸಿನ ವಿವಿಧ ಪ್ರೋಗ್ರಾಮಗಳ ಪ್ರವೇಶಾತಿಗಳನ್ನು ನೀಡಲು ಪ್ರವೇಶಾತಿ ಶೈಕ್ಷಣಿಕ ವೇಳಾಪಟ್ಟಿಯನ್ನು ಸರಕಾರದ ಆದೇಶ ಸಂಖ್ಯೆ:ಇಡಿ/212/ಯುಎನ್ಇ/2024, ಬೆಂಗಳೂರು, ದಿನಾಂಕ:04.10.2024ರ ಪ್ರಕಾರ ದಿನಾಂಕ: 26.06.2025ರಂದು ಪೂರ್ವ ಅನ್ವಯ ಆಗುವಂತೆ ದಿನಾಂಕ 11.07.2025 ರವರೆಗೆ ಪ್ರವೇಶಾತಿಯು ದಂಡರಹಿತ ಕೊನೆಯ ದಿನವಾಗಿ ನೀಡಲಾಗಿದ್ದು ಪ್ರಸ್ತುತ 2024-25ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ಹಾಗೂ 2 (Supplementary Exams) ಪರೀಕ್ಷೆಗಳು ಪೂರ್ಣಗೊಂಡಿದ್ದು, ದ್ವಿತೀಯ ಪಿಯುಸಿ ಪರೀಕ್ಷೆ-3ರ ಪರೀಕ್ಷೆಗಳು ಜೂನ್ ತಿಂಗಳಿನಲ್ಲಿ ಪ್ರಾರಂಭಗೊಳ್ಳುತ್ತಿದ್ದು, ಫಲಿತಾಂಶ ಪ್ರಕಟಗೊಳ್ಳಲು ಸೂಕ್ತ ಕಾಲಾವಕಾಶ ಬೇಕಾಗಿರುವುದರಿಂದ, ಸದರಿ ವಿದ್ಯಾರ್ಥಿಗಳು ಪದವಿ ಕಾಲೇಜುಗಳಿಗೆ ಪ್ರವೇಶಾತಿ ಪಡೆಯಲು ಅನುಕೂಲವಾಗಲು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು/ಕಾಲೇಜು ಶಿಕ್ಷಣ/ಅನುದಾನ/ ಅನುದಾನ ರಹಿತ/ಕಾಲೇಜುಗಳಿಗೆ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) ಅನ್ವಯಿಸುವಂತೆ ದಿನಾಂಕ: 30.08.2025ರವರೆಗೆ ದಂಡ ಶುಲ್ಕರಹಿತವಾಗಿ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲಾಗಿದೆ.

ಮುಂದುವರೆಯುತ್ತ, ಸದರಿ ಮಹಾವಿದ್ಯಾಲಯಗಳು ಪ್ರಥಮ ಸೆಮೆಸ್ಟರ್‌ಗೆ ಪ್ರವೇಶಾತಿಯನ್ನು ಮಾಡಲು ದಂಡಸಹಿತ ದಿನಾಂಕ: 31.08.2025 ರಿಂದ 03.09.2025ರವರೆಗೆ ರೂ. 500/- ದಂಡಸಹಿತವೆಂದು ಆನ್‌ಲೈನ್ ಮೂಲಕ ಪ್ರವೇಶಾತಿ ನೀಡುವ ಅವಕಾಶವನ್ನು ಕಲ್ಪಿಸಿಕೊಡಲು UUCMS ನಲ್ಲಿ ಅಳವಡಿಸಲು ಸೂಚಿಸಲಾಗಿದೆ. ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಮತ್ತು ಮೂಲ ದಾಖಲಾತಿಗಳನ್ನು ದಿನಾಂಕ: 06.09.2025 ರಂದು ಸಲ್ಲಿಸಲು ಈ ಮೂಲಕ ತಿಳಿಸಲಾಗಿದು. ಮುಂದುವರೆದು ನಿಗದಿತ ದಿನಾಂಕದ ನಂತರ ಬಂದಂತಹ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಮತ್ತು ಮೂಲ ದಾಖಲಾತಿಗಳನ್ನು ಸಲ್ಲಿಸಿದಲ್ಲಿ ಪ್ರತಿ ದಿನ 500/- ದಂಡವಿಧಿಸಲಾಗುವುದು.

P.T.O



Scanned with CamSca

ವಿಶೇಶ ಸೂಚನೆ: ವಿದ್ಯಾರ್ಥಿಗಳ ಪ್ರವೇಶಾತಿ ರದ್ದತಿಗೆ ಶುಲ್ಕ ರೂ 1920 ಭರಿಸಿ ತಕ್ಕದ್ದು.

ಕುಲಸಚಿವರು 14/7/2
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,
ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ,

ಪ್ರತಿಗಳು:
1. ಮುಖ್ಯಸ್ಥರು, ಗಣಕ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಈ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ಕೋರಿದೆ.
2. ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಮಾಹಿತಿಗಾಗಿ.
3. ವಿಶೇಷಾಧಿಕಾರಿಗಳು, ವಿದ್ಯಾಮಂಡಲ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಮಾಹಿತಿಗಾಗಿ.
4. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.



Scanned with CamSca